ಅ) 1993ರ ಭಟ್ಕಳ ಗಲಭೆಯಲ್ಲಿ ಡಾ॥ ಯು.ಚಿತ್ತರಂಜನ್‌ರವರು ಹತ್ಯೆ ಗೀಡಾಗಿದ್ದರ ಬಗ್ಗೆ ವಿಚಾರಣೆನಡೆಸಲು ನೇಮಿಸಿದ ತನಿಖಾ ಆಯೋಗದ ವರದಿಯನ್ನು ಇದು ವರೆಗೆ ಸದನದಲ್ಲಿ ಮಂಡಿಸದಿರಲು ಕಾರಣಗಳೇನು?

ಆ) ಕಳೆದ ಅಧಿವೇಶನದಲ್ಲಿ ಈ ಬಗ್ಗೆ ನೀಡಿದ್ದ ಆಶ್ವಾಸನೆಯನ್ನು ಕಾರ್ಯಗತಗೊಳಿಸದಿರಲು ಕಾರಣಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು) :

ಅ) 1993ರ ಭಟ್ಕಳ ಗಲಭೆಯಲ್ಲಿ ಡಾ॥ ಯು. ಚಿತ್ತರಂಜನ್ ಹತ್ಯೆಗೀಡಾಗಿದ್ದರು ಎಂದು ಪ್ರಶ್ನೆಯಲ್ಲಿ ಸೂಚಿಸಿದ್ದು, ಅದು ಸರಿಯಲ್ಲ, ದಿನಾಂಕ 10-4-1999ರಂದು ಡಾ॥ಯು.ಚಿತ್ತರಂಜನ್‌ರವರ ನಿವಾಸದಲ್ಲಿಅವರ ಹತ್ಯೆಆಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ವಿಚಾರಣೆನಡೆಸಲು ನ್ಯಾಯಮೂರ್ತಿ ಕೆ.ರಾಮಚಂದ್ರಯ್ಯ ವಿಚಾರಣಾ ಆಯೋಗವನ್ನು ರಚಿಸಲಾಗಿತ್ತು. ಸದರಿ ಆಯೋಗವು ತನ್ನ ವರದಿಯನ್ನು ದಿನಾಂಕ 31-3-1998ರಂದು ಸರ್ಕಾರಕ್ಕೆ ಸಲ್ಲಿಸಿದೆ. ವರದಿಯನ್ನು ಪರಿಶೀಲಿಸುತ್ತಿದ್ದು ಸದ್ಯದಲ್ಲೇ ತೀರ್ಮಾನ ಕೈಗೊಳ್ಳಲಾಗುವುದು. ನಂತರ ಸದನದಲ್ಲಿ ಮಂಡಿಸಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಆ) ವರದಿಯನ್ನು ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿದೆ.

ಮಂಕಿ ಏತ ನೀರಾವರಿ ಯೋಜನೆ

316 (98) ಶ್ರೀ ಶಿವಾನಂದ ನಾಯಕ್ (ಭಟ್ಕಳ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಕಿ ಏತ ನೀರಾವರಿ ಯೋಜನೆಗೆ ಸಾಂಕೇತಿಕ ಅನುದಾನ(ಟೋಕನ್ ಗ್ರಾಂಟ್) ಒದಗಿಸಲಾಗಿದೆಯೇ;

ಆ) 1998ರ ಬಜೆಟ್ ಅಧಿವೇಶನದಲ್ಲಿ ಮಾನ್ಯ ಸಚಿವರು ಸ್ಥಳ ಪರಿಶೀಲಿಸಿ ಮಂಕಿ ಏತ ನೀರಾವರಿ ಯೋಜನೆಗೆ ಮಂಜೂರಾತಿ ನೀಡುವುದಾಗಿ ಆಶ್ವಾಸನೆ ನೀಡಿದ್ದು, ಸರ್ಕಾರದ ಗಮನದಲ್ಲಿದೆಯೇ;

ಇ) ಹಾಗಿದ್ದಲ್ಲಿ ಈ ಯೋಜನೆಯ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಮಂಕಿ ಏತ ನೀರಾವರಿ ಯೋಜನೆಗೆ 1997-98ನೇ ಸಾಲಿಗೆ ರೂ.0.01ಲಕ್ಷ ಹಾಗೂ 1998-99ನೇ ಸಾಲಿಗೆ ರೂ.0.01ಲಕ್ಷ ಸಾಂಕೇತಿಕ ಅನುದಾನ ಒದಗಿಸಲಾಗಿದ್ದು, ಆ ಹಣವನ್ನು ಇಡುಗಂಟಿಗೆ ಸೇರಿಸಲಾಗಿದೆ.

ಆ) ಸರ್ಕಾರದ ಗಮನದಲ್ಲಿದೆ.

ಇ) ಸದರಿ ಏತ ನೀರಾವರಿ ಯೋಜನೆ ಕುರಿತು ಮರುಸರ್ವೆಕಾರ್ಯ ಪ್ರಗತಿಯಲ್ಲಿದ್ದು, 1999-2000 ಆಯವ್ಯಯದಲ್ಲಿ ಸೂಕ್ತ ಅನುದಾನ ದೊಂದಿಗೆ ಸೇರಿಸಲು ಪ್ರಯತ್ನಿಸಲಾಗುವುದು.